O.S. ನಂಬರಃ 45/2017

ಪಿ. ಡಬ್ಲ್ಯೂಃ 1

ದಿಃ 15-07-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟಿ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಎಸ್.ಯು.ಎ. ವಕೀಲರಿಂದಃ

1 ಮತ್ತು 2 ನೇ ವಾದಿಯರು ನನ್ನ ಅಕ್ಕಂದಿರು. ನನ್ನ ಅಕ್ಕಂದಿರ ಪರವಾಗಿಯೂ ಸಹ ಈ ದಿನ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿ. ಭಾಗಿ ವಿಠೋಬ ಗೌಡ ನನ್ನ ತಾಯಿಯ ತಂಗಿ ಮತ್ತು ಮಾಣಿ ನನ್ನ ತಾಯಿ. ತುಕಾರಾಮ ಹನುಮಾ ಗಾಂವಕರ ಯಾರೆಂದು ಗೊತ್ತಿಲ್ಲ. ಆತ ನನ್ನ ತಾಯಿ ದಾಯವಾದಿ ಇರಬೇಕು, ಅಷ್ಟೊಂದು ಗೊತ್ತಿಲ್ಲ ಎಂದು ಹೇಳುತ್ತಾರೆ. ಪಾಂಡು ಗಣಪಾ ಗಾಂವಕರ ಇವರ ಕುರಿತು ಗೊತ್ತಿಲ್ಲ. ಭಾಗಿ, ಮಾಣಿ, ತುಕಾರಾಮ ಮತ್ತು ಪಾಂಡುರವರು ಹೊನ್ನೇಬೈಲ ಗ್ರಾಮದ ಮ್ಯುಟೇಷನ್ ನಂ. 1693 ಪ್ರಕಾರ ವಾಟ್ನಿ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಅವರ ಜಾಗೆ ಬೇರೆ ಮತ್ತು ನಮ್ಮ ಜಾಗೆ ಬೇರೆ ಎಂದು ಹೇಳುತ್ತಾರೆ. ಭಾಗಿ ವಿಠೋಬ ಗಾಂವಕರ ಮತ್ತು ಮಾಣಿ ವಾಮನ ಗಾಂವಕರ ರವರಿಗೆ ಒಟ್ಟು 10 ಸರ್ವೇ ನಂಬರಗಳಲ್ಲಿರುವ ಜಮೀನುಗಳು ಬಂದಿರುತ್ತದೆ ಎಂದರೆ ಸರಿ.

ಹೊನ್ನೆಬೈಲ ಗ್ರಾಮದ ಜಮೀನುಗಳಲ್ಲಿ ವಾಟ್ನಿ ಕೇಳಿ ಮೂಲದಾವಾ ನಂ. 89/2008 ಎಂದು ದಾವೆ ಸಲ್ಲಿಸಿದ್ದೇನೆ ಎಂದರೆ ಅವರೇ ಹಾಕಿದ್ದರು ಎಂದು ಹೇಳುತ್ತಾರೆ. ಅದರಲ್ಲಿ ತಾಯಿ ಪರವಾಗಿ ಸಾಕ್ಷಿ ಹೇಳಲು ನಾನೇ ಬಂದಿದ್ದೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ಸಮನ್ಸ ಮೇಲೆ ಹಾಜರಾಗಿದ್ದೆ ಎಂದರೆ ಸರಿಯಲ್ಲ. ಆ ದಾವೆಯಲ್ಲಿ ಎಸ್. ಜಿ. ನಾಯ್ಕು ವಕೀಲರು ನಮ್ಮ ಪರವಾಗಿ ಹಾಜರು ಆಗಿದ್ದರು ಎಂದರೆ ಸರಿಯಲ್ಲ. 2008 ರಲ್ಲಿ ನನಗೆ 25 ವರ್ಷ ವಯಸ್ಸಾಗಿತ್ತು ಎಂದರೆ ಸರಿಯಲ್ಲ. ಮೂಲ ದಾವಾ ನಂ.

89/2008 ರಲ್ಲಿ ಹಾಜರಾಗಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹೊನ್ನೆಬೈಲ ಗ್ರಾಮದ ಸರ್ವೇ ನಂ. 142/15, 142/1, 142/7, 142/9, 142/12, 142/17, 142/18 ಹೀಗೆ ಒಟ್ಟು 7 ಸರ್ವೇ ನಂಬರಗಳಲ್ಲಿ ನನಗೆ ಹಾಗೂ ಉಳಿದ ವಾದಿಯರಿಗೆ ಹಿಸ್ಸೆ ಇದೆ ಎಂದರೆ ಸರಿ. ಸದರಿ ಜಮೀನುಗಳ ಕುರಿತು ಹೊನ್ನೆಬೈಲ ಗ್ರಾಮದ ಮ್ಯುಟೇಷನ್ ನಂ. 33/2010-11 ಪ್ರಕಾರ ವಾರಸಾ ಆಗಿರುತ್ತದೆ ಎಂದರೆ ಸರಿ. ತಂದೆಯವರ ಆಸ್ತಿಯಲ್ಲಿ ಮೂರು ಜನ ಸಹೋದರಿಯರು ಸೇರಿ ವಾರಸಾ ಮಾಡಿಕೊಂಡಿದ್ದೇವೆ ಎಂದರೆ ಸರಿ. ವಾರಸಾವನ್ನು ಮಾಡಿಕೊಳ್ಳುವ ವಿಧಾನ ಗೊತ್ತಿದೆ ಎಂದರೆ ಸಾಕ್ಷಿ ಬೇರೆಯವರ ಮುಖಾಂತರ ಮಾಡಿಸಿದ್ದೇವೆ ಎಂದು ಹೇಳುತ್ತಾರೆ. ಬೇರೆಯವರ ಮುಖಾಂತರ ವಾರಸಾ ಮಾಡಿಸುವ ಸಮಯದಲ್ಲಿ ದಾಖಲೆಗಳನ್ನು ನೀಡಿದ್ದೇವೆ ಎಂದರೆ ಸರಿ. ಸದರಿ ಮ್ಯುಟೇಷನ್ ವಾರಸಾ ಯಾರು ಮಾಡಿಸಿಕೊಟ್ಟಿದ್ದಾರೆ ಎಂದು ಹೆಸರು ಗೊತ್ತಿಲ್ಲ. ವಾರಸಾ ಹೇಗೆ ಮಾಡಿಕೊಳ್ಳಬೇಕೆಂದು ನಾವು ನೇಮಿಸಿದ ವ್ಯಕ್ತಿ ಹೇಳಿದ್ದಾನೆ ಎಂದರೆ ಸಹಿ ಮಾತ್ರ ಪಡೆದಿದ್ದಾನೆ ಎಂದು ಹೇಳುತ್ತಾರೆ. ವಾರಸಾ ಮಾಡುವಾಗ ಸಹಿ ಪಡೆದ ವ್ಯಕ್ತಿಯ ಹೆಸರು ಹೇಳಲು ಬರುವುದಿಲ್ಲ. ನನ್ನ ತಂದೆ ಆಸ್ತಿಗಳ ವಾರಸಾ ಕುರಿತು ಸ್ಪಷ್ಟ ಮಾಹಿತಿ ಇದೆ ಎಂದರೆ ಸರಿಯಲ್ಲ. ನನ್ನ ತಂದೆ ಕಡೆಯಿಂದ ಬಂದ ಆಸ್ತಿಗಳ ಮೇಲೆ ಸಾಲ ಮಾಡಿದ್ದೇವು ಎಂದರೆ 2 ನೇ ವಾದಿ ತೆಗೆದಿರಬಹುದು ಎಂದು ಹೇಳುತ್ತಾರೆ. ನಾನು ಮತ್ತು 2 ನೇ ವಾದಿ ಸಾಲ ಪಡೆದಿದ್ದೇವೆ ಆ ಕುರಿತು ಮ್ಯುಟೇಷನ್ ಆಗಿದೆ ಎಂದರೆ ಸರಿಯಲ್ಲ. ಪ್ರಾಥಮಿಕ ಭೂ ಅಭಿವೃದ್ಧಿ ನಿಗಮದಲ್ಲಿ ನಾನು ಹಾಗೂ ಬಾಸಗೋಡ ಸೊಸೈಟಿಯಲ್ಲಿ 2 ನೇ ವಾದಿ ತೆಗೆದಿದ್ದಾರೆ ಎಂದರೆ ನಾನು ಸಾಲ ಮಾಡಿದ್ದೇನೆ, ಆದರೆ ನನ್ನ ಅಕ್ಕ ಸಾಲ ಮಾಡಿಲ್ಲ ಎಂದು ಹೇಳುತ್ತಾರೆ. ಈ ಕುರಿತು ಪಹಣಿ ಪತ್ರಿಕೆಯಲ್ಲಿ ಭೋಜಾ ದಾಖಲಾಗಿದೆ ಎಂದರೆ ತಂದೆ ತೆಗೆದಿರಬಹುದು ಎಂದು ಹೇಳುತ್ತಾರೆ.

ಅಂದಾಜು 30 ವರ್ಷಗಳ ಹಿಂದೆ ನನ್ನ ತಂದೆ ಮೃತಪಟ್ಟಿರುತ್ತಾರೆ. ಭಾಗಿ ಗಂಡ ನಾನು ಚಿಕ್ಕವಳಿದ್ದಾಗಲೇ ಮೃತಪಟ್ಟಿದ್ದಾನೆ. ನನ್ನ ತಾಯಿ 20 ವರ್ಷಗಳ ಹಿಂದೆ ಮೃತಪಟ್ಟಿದ್ದು, ಚಿಕ್ಕಮ್ಮ ಭಾಗಿ ಯಾವಾಗ ಮೃತಪಟ್ಟಿದ್ದಾಳೆ ಎಂದು ಹೇಳಲು ಬರುವುದಿಲ್ಲ.

ನನ್ನ ತಾಯಿ ಮೃತಪಟ್ಟ ಬಗ್ಗೆ ಹೊನ್ನೆಬೈಲ ಗ್ರಾಮದ ನನ್ನ ತಂದೆ ಆಸ್ತಿ ವಾರಸಾ ಮಾಡಿಕೊಟ್ಟ ವ್ಯಕ್ತಿ ಬಳಿಯೇ ವಾರಸಾಕ್ಕಾಗಿ ಕೊಡಲು ಅವಕಾಶವಿತ್ತು ಎಂದರೆ ಸಾಕ್ಷಿ 1 ನೇ ಪ್ರತಿವಾದಿ ನನ್ನ ತಾಯಿಯ ಹೆಸರು ಕಡಿಮೆ ಮಾಡಿ ವಾರಸಾ ಮಾಡಿಸುತ್ತೇನೆ ಎಂದು ಸುಳ್ಳು ಹೇಳಿ ಸಹಿ ಪಡೆದಿರುತ್ತಾರೆ ಎಂದು ಹೇಳುತ್ತಾರೆ. 2011 ರಲ್ಲಿ ನನ್ನ ತಾಯಿ ಇರಲಿಲ್ಲ. ನನ್ನ ತಾಯಿ ಮತ್ತು ಅವಳ ಸಹೋದರಿ ಭಾಗಿ ಮೃತಪಟ್ಟ ಬಗ್ಗೆ ಮರಣ ಉತಾರೆ ತೆಗೆಸಿದ ಬಗ್ಗೆ ಮಾಹಿತಿ ಇಲ್ಲ. ನನ್ನ ತಾಯಿ ಮೃತಪಟ್ಟ ನಂತರ ನಮ್ಮ ಹೆಸರಿನಲ್ಲಿ ಆಸ್ತಿ ವಾರಸಾ ಆಗಿದೆ. ಈ ಕುರಿತು ದಾಖಲೆ ಹಾಜರುಪಡಿಸಿದ್ದೇನೆ. ನನ್ನ ತಾಯಿ ಮತ್ತು ಭಾಗಿರವರ ಕಡೆಯಿಂದ ವಾರಸಾ ಆದ ಬಗ್ಗೆ ದಾಖಲೆ ನೋಡಿದ್ದೇನೆ, ಆ ನಂತರ 1 ನೇ ಪ್ರತಿವಾದಿ ಮಾಡಿಕೊಂಡಿರುತ್ತಾರೆ.

ನಮ್ಮ ಮನೆ ಹೊನ್ನೆಬೈಲನಲ್ಲಿದೆ. ಪ್ರತಿವಾದಿಯರ ಮನೆ ಮಂಜುಗುಣಿಯಲ್ಲಿದೆ. ನನ್ನ ತಾಯಿ ಹೆಸರಿನಲ್ಲಿರುವ ಆಸ್ತಿ ವಾರಸಾ ಕುರಿತು ತಹಶೀಲ್ದಾರ ಕಚೇರಿಗೆ ನಾವೇ ಮಾಹಿತಿ ನೀಡಿದ್ದೇವೆ ಎಂದರೆ ಸರಿಯಲ್ಲ, ಸಾಕ್ಷಿ 1 ನೇ ಪ್ರತಿವಾದಿ ಹೇಳಿದ್ದ ಎಂದು ಹೇಳುತ್ತಾರೆ.  ಅಸಲರ್ಜಿ ಪ್ಯಾರಾ ನಂ. 3 ರಲ್ಲಿಯ ವಿಷಯವನ್ನು ನಾನೇ ಹೇಳಿ ಬರೆಸಿದ್ದೇನೆ. ನಮಗೆ ಓದು ಬರಹ ಸರಿಯಾಗಿ ಬರುವುದಿಲ್ಲ, ಕಾರಣ ದಾವಾ ಪ್ಯಾರಾ ನಂ. 3 ದಲ್ಲಿ ಬರೆದ ಸಂಗತಿ ವಕೀಲರು ಬರೆದಿದ್ದಾರೆ ಎಂದರೆ ಸರಿ. 1 ನೇ ಪ್ರತಿವಾದಿ ಕೇಳಿದ ದಾಖಲೆಗೆ ಸಹಿ ಹಾಕಿದ್ದೇನೆ, ಆದರೆ ಫೊಟೋ ನೀಡಿದ ಬಗ್ಗೆ ನೆನಪಿಲ್ಲ. ವಾದಿ 1 ಮತ್ತು 2 ರವರು ಫೊಟೋ ನೀಡಿದ ಬಗ್ಗೆ ನನಗೆ ಗೊತ್ತಿಲ್ಲ.  1 ನೇ ಪ್ರತಿವಾದಿ ಹೇಳಿದ ಅಷ್ಟು ಕಾಗದ ಪತ್ರಗಳಿಗೆ ಸಹಿ ಮಾಡಿದ್ದೇವೆ. ಸಹಿ ಹಾಕಿದ್ದು ಅಂದಾಜು 6-7 ವರ್ಷದ ಹಿಂದೆ ಇರಬಹುದು. ಈಗ ನೋಡುತ್ತಿರುವ ದಾಖಲೆಗಳ ಮೇಲೆ ನನ್ನ ಸಹಿ ಇರುತ್ತವೆ. ಸಾಕ್ಷಿ ಎರಡು ಜಿಪಿಎ ದಾಖಲೆಗಳ ಮೇಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅವುಗಳು 200/- ರೂ ಬಾಂಡ್ ಗಳ ಮೇಲೆ ಬರೆದಿದ್ದು, ತದನಂತರದಲ್ಲಿ ಕೊರತೆ ಶುಲ್ಕ ಭರಿಸಿದ ಬಗ್ಗೆ ಜಿಲ್ಲಾಧಿಕಾರಿಗಳು (ಮುದ್ರಾಂಕ) ಹಾಗೂ ಜಿಲ್ಲಾ ನೊಂದಣಾಧಿಕಾರಿಗಳು,

ಕಾರವಾರ ಉತ್ತರಕನ್ನಡ ರವರು ನೀಡಿದ ಸರ್ಟಿಫಿಕೇಟ್ ಹಾಗೂ ಪ್ರಸ್ತಾವನೆ ನಕಲು ಪ್ರತಿಯನ್ನು ಹಾಜರುಪಡಿಸಿದ್ದು, ಅವುಗಳ ಮೂಲ ಪ್ರತಿ ಹಾಜರುಪಡಿಸುವ ಕರಾರಿಗೆ ಒಳಪಟ್ಟು ಜಿಪಿಎ ದಾಖಲೆಗಳನ್ನು ನಿಡಿ–1 ಮತ್ತು 2, ಸಾಕ್ಷಿಯ ಸಹಿಗಳನ್ನು ನಿಡಿ–1 ಎ,1 ಬಿ ಮತ್ತು 2 ಎ,2 ಬಿ, ಡಿ.ಆರ್., ಕಾರವಾರ ರವರು ನೀಡಿದ ಪ್ರಸ್ತಾವನೆ ಮತ್ತು ಸರ್ಟಿಫೀಕೇಟಗಳ ನಕಲು ಪ್ರತಿಯನ್ನು ನಿಡಿ–3 ಮತ್ತು 4 ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ನನ್ನ ತಾಯಿ ವಾರಸಾ ಸಲುವಾಗಿ 1 ನೇ ಪ್ರತಿವಾದಿ ಪಡೆದಿದ್ದಾನೆ ಎಂದು ಹೇಳುತ್ತಾರೆ.

(ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲನ್ನು ವಿನಂತಿ ಮೇರೆಗೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.